# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು | : | ಶ್ರೀ ಸಿ.ಟಿ.ರವಿ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 751 |
| ಉತ್ತರಿಸಬೇಕಾದ ದಿನಾಂಕ | : | 23-07-2024 |
| ಉತ್ತರಿಸಬೇಕಾದ ಸಚಿವರು | : | ಸಹಕಾರ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಸಹಕಾರಿ ಬ್ಯಾಂಕ್‌ಗಳಲ್ಲಿ ಕೃಷಿ ಚಟುವಟಿಕೆಗಳಿಗೆ ಸಾಲ ಪಡೆಯುವ ರೈತರ ಸಂಖ್ಯೆ ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಕೃಷಿ ಸಾಲ ಹೆಚ್ಚಳಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ಒದಗಿಸುವುದು) | ಹೌದು, ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>2024-25 ನೇ ಸಾಲಿನಲ್ಲಿ ಜೂನ್ ಅಂತ್ಯದ ವರೆಗೆ ಸಹಕಾರ ಸಂಘಗಳು ಹೊಸದಾಗಿ ಅರ್ಜಿ ಸಲ್ಲಿಸಿದ 9797 ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ ರೂ.93.49 ಕೋಟಿಗಳ ಬೆಳೆ ಸಾಲ ಮತ್ತು 2815 ರೈತರಿಗೆ ರೂ.138.36 ಕೋಟಿಗಳ ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಸಾಲ ವಿತರಿಸಿದ್ದು, ಸಾಲ ಪಡೆಯುವ ರೈತರ ಸಂಖ್ಯೆ ಹೆಚ್ಚಳವಾಗಿದೆ.<br><br>ಕೃಷಿ ಸಾಲ ಹೆಚ್ಚಳಕ್ಕಾಗಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ/ಡಿಸಿಸಿ ಬ್ಯಾಂಕುಗಳು/ಪಿಕಾರ್ಡ್ ಬ್ಯಾಂಕುಗಳ ಮೂಲಕ 2024-25 ನೇ ಸಾಲಿಗೆ 35.10 ಲಕ್ಷ ರೈತರಿಗೆ ರೂ.25,000 ಕೋಟಿಗಳ ಅಲ್ಪಾವಧಿ ಕೃಷಿ ಸಾಲ ಮತ್ತು 0.90 ಲಕ್ಷ ರೈತರಿಗೆ ರೂ.2000.00 ಕೋಟಿಗಳ ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಸಾಲ ವಿತರಿಸಲು ಗುರಿ ನಿಗದಿಪಡಿಸಿದೆ. |

| | | |
|---|---|---|
| | | ಕಳೆದ ಸಾಲಿನಲ್ಲಿ 29,26,910 ರೈತರಿಗೆ ರೂ.22,982.10 ಕೋಟಿಗಳ ಬೆಳೆ ಸಾಲ, 54,255 ರೈತರಿಗೆ ರೂ.1517.77 ಕೋಟಿಗಳ ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಸಾಲ ಹೀಗೆ ಒಟ್ಟು 29,81,165 ರೈತರಿಗೆ ರೂ.24,499.87 ಕೋಟಿಗಳ ಕೃಷಿ ಸಾಲ ವಿತರಿಸಲಾಗಿದ್ದು, 2024-25 ನೇ ಸಾಲಿಗೆ ಸುಮಾರು ರೂ.2566.02 ಕೋಟಿಗಳಷ್ಟು ಹೆಚ್ಚಿನ ಕೃಷಿ ಸಾಲ ವಿತರಿಸಲು ಕ್ರಮ ವಹಿಸಲಾಗಿದೆ. |
| ಆ) | ಪ್ರಸಕ್ತ ಸಾಲಿನಲ್ಲಿ ಸಹಕಾರಿ ಬ್ಯಾಂಕ್‌ಗಳಲ್ಲಿ ಬೆಳೆ ಸಾಲಕ್ಕೆ ಬಂದ ಅರ್ಜಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು) | 2024-25 ನೇ ಸಾಲಿನಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ದಿನಾಂಕ:12-07-2024 ರವರೆಗೆ ಬೆಳೆ ಸಾಲಕ್ಕಾಗಿ ಪಡೆದ ಒಟ್ಟು ಅರ್ಜಿಗಳ ಸಂಖ್ಯೆ 7,81,906 ಆಗಿರುತ್ತದೆ.<br><br>ಜಿಲ್ಲಾವಾರು ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |
| ಇ) | ರೈತರ ಬೆಳೆ ಸಾಲಕ್ಕೆ ಬಂದ ಅರ್ಜಿಗಳಲ್ಲಿ ತಿರಸ್ಕೃತಗೊಂಡ ಮತ್ತು ಸಾಲ ಮಂಜೂರು ಮಾಡಿದ ಅರ್ಜಿಗಳೆಷ್ಟು, ನೀಡಿರುವ ಒಟ್ಟು ಸಾಲದ ಮೊತ್ತ ಎಷ್ಟು ; (ಸಂಪೂರ್ಣ ವಿವರ ಒದಗಿಸುವುದು) | 2024-25 ನೇ ಸಾಲಿನಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ದಿನಾಂಕ:12-07-2024 ರವರೆಗೆ 7,80,363 ಅರ್ಜಿಗಳಿಗೆ ರೂ. 6799.17 ಕೋಟಿಗಳ ಸಾಲ ವಿತರಣೆ ಮಾಡಿದ್ದು, 20 ಅರ್ಜಿಗಳನ್ನು ಮಾತ್ರ ಭೂ ದಾಖಲಾತಿಯಲ್ಲಿನ ಹೆಸರು ಮತ್ತು ಅರ್ಜಿದಾರರ ಹೆಸರು ತಾಳೆಯಾಗದೇ ಇರುವುದರಿಂದ ತಿರಸ್ಕರಿಸಲಾಗಿದೆ ಹಾಗೂ 1523 ಅರ್ಜಿಗಳಿಗೆ ಸಾಲ ಮಂಜೂರು ಮಾಡಲು ಬಾಕಿ ಇರುತ್ತದೆ.<br><br>ಜಿಲ್ಲಾವಾರು ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |

| | | |
|---|---|---|
| ಈ) | ಸಹಕಾರಿ ಬ್ಯಾಂಕ್‌ಗಳಲ್ಲಿ ಕೃಷಿ ಚಟುವಟಿಕೆಗಳಿಗೆ ಪಡೆದ ಸಾಲದ ಬಡ್ಡಿ ಮನ್ನಾ ಮಾಡಲು ಸರ್ಕಾರ ಕ್ರಮಕೈಗೊಳ್ಳುವುದೇ; ಈವರೆಗೆ ಎಷ್ಟು ಬಡ್ಡಿ ಮನ್ನಾ ಮಾಡಲಾಗಿದೆ; ಬಡ್ಡಿ ಮನ್ನಾ ಲಾಭ ಪಡೆದ ರೈತರ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು) | 2023–24 ನೇ ಸಾಲಿನಲ್ಲಿ ರಾಜ್ಯದ 223 ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶಗಳೆಂದು ಘೋಷಿಸಲಾದ ಹಿನ್ನೆಲೆಯಲ್ಲಿ ರೈತರ ನೆರವಿಗೆ ಧಾವಿಸಲು ಸಹಕಾರ ಸಂಘಗಳಲ್ಲಿ ದಿನಾಂಕ: 31–12–2023 ಕ್ಕೆ ಸುಸ್ತಿ ಆಗಿದ್ದ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲಗಳ ಕಂತುಗಳನ್ನು ರೈತರು ಫೆಬ್ರವರಿ–2024 ರೊಳಗೆ ಪಾವತಿಸಿದಲ್ಲಿ ಬಡ್ಡಿಯನ್ನು ಸರ್ಕಾರವೇ ಭರಿಸುವುದಾಗಿ ತಿಳಿಸಿ ಸರ್ಕಾರ ಆದೇಶ ಸಂಖ್ಯೆ ಸಿಓ 291 ಸಿಎಲ್‌ಎಸ್ 2023, ದಿ:20–1–2024 ರಂದು ಆದೇಶ ಹೊರಡಿಸಿ ನಂತರ ಸುಸ್ತಿ ಸಾಲಗಳ ಕಂತುಗಳನ್ನು ರೈತರು ಮರುಪಾವತಿಸುವ ಅವಧಿಯನ್ನು ಮಾರ್ಚ್–2024 ರವರೆಗೆ ವಿಸ್ತರಿಸಲಾಗಿದೆ.<br><br>ಈ ಯೋಜನೆಯಲ್ಲಿ ಸಹಕಾರ ಸಂಸ್ಥೆಗಳು ತಮ್ಮ ಹಂತದಲ್ಲಿ ರೈತರ ಬಡ್ಡಿ ಮನ್ನಾ ಮಾಡಿ ರೂ. 227.95 ಕೋಟಿಗಳಿಗೆ ಕ್ಲೇಮು ಬಿಲ್ಲು ಸಲ್ಲಿಸಿರುತ್ತಾರೆ. ಈ ಯೋಜನೆಯಲ್ಲಿ ಲಾಭ ಪಡೆದ ಒಟ್ಟು ರೈತರ ಸಂಖ್ಯೆ 34,374 ಆಗಿರುತ್ತದೆ.<br><br>ಜಿಲ್ಲಾವಾರು ವಿವರಗಳನ್ನು **ಅನುಬಂಧ–2** ರಲ್ಲಿ ನೀಡಲಾಗಿದೆ. |
| ಉ) | ರೈತರ ಸಾಲ ಮನ್ನಾ ಮಾಡುವ ಕುರಿತು ಸರ್ಕಾರ ಕ್ರಮಕೈಗೊಳ್ಳುವುದೇ; ಈ ಕುರಿತು ಸರ್ಕಾರದ ನಿಲುವೇನು? | ಪ್ರಸ್ತುತ ಸಹಕಾರ ಸಂಸ್ಥೆಗಳಲ್ಲಿ ರೈತರು ಪಡೆದಿರುವ ಸಾಲವನ್ನು ಮನ್ನಾ ಮಾಡುವ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. |

**ಸಂಖ್ಯೆ: ಸಿಓ 165 ಸಿಎಲ್‌ಎಸ್ 2024**

K. N. Rajanna

**(ಕೆ.ಎನ್.ರಾಜಣ್ಣ)**
**ಸಹಕಾರ ಸಚಿವರು**

ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ಶ್ರೀ ಸಿ.ಟಿ ರವಿ (ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:751 ಗೆ ಅನುಬಂಧ-1

2024-25 ನೇ ಸಾಲಿನಲ್ಲಿ ಸಹಕಾರ ಸಂಸ್ಥೆಗಳಲ್ಲಿ ರೈತರು ಬೆಳೆ ಸಾಲಕ್ಕಾಗಿ ಅರ್ಜಿ ಸಲ್ಲಿಸಿದ ಮತ್ತು ಸಾಲ ವಿತರಿಸಿದ ವಿವರ ( ರೂ.ಲಕ್ಷಗಳಲ್ಲಿ)

| ಕ್ರ.ಸಂ | ಜಿಲ್ಲೆಯ/ಬ್ಯಾಂಕಿನ ಹೆಸರು ಹೆಸರು | ದಿನಾಂಕ:12-07-2024 ರವರೆಗೆ ಸ್ವೀಕೃತವಾದ ಅರ್ಜಿಗಳು | ಸಾಲ ಮಂಜೂರು ಮಾಡಿದ ಅರ್ಜಿಗಳು | | ತಿರಸ್ಕೃತ ಅರ್ಜಿಗಳು | ಮಂಜೂರಿಗೆ ಬಾಕಿ ಇರುವ ಅರ್ಜಿಗಳು |
|---|---|---|---|---|---|---|
| | | | ಸಂಖ್ಯೆ | ಮೊತ್ತ | | |
| 1 | ಬಾಗಲಕೋಟೆ | 69247 | 69247 | 334.94 | | |
| 2 | ಬೆಳಗಾವಿ | 226043 | 226043 | 1474.04 | | |
| 3 | ಬೆಂಗಳೂರು ನಗರ | 1374 | 1374 | 9.78 | | |
| 4 | ಬೆಂಗಳೂರು ಗ್ರಾಮಾಂತರ | 3447 | 3447 | 24.81 | | |
| 5 | ರಾಮನಗರ | 7140 | 7140 | 53.77 | | |
| 6 | ವಿಜಯಪುರ | 27837 | 27837 | 205.56 | | |
| 7 | ವಿಜಯನಗರ | 64495 | 64495 | 628.02 | | |
| 8 | ಬಳ್ಳಾರಿ | 39582 | 39582 | 374.34 | | |
| 9 | ಬೀದರ | 24646 | 24646 | 99 | | |
| 10 | ಶಿವಮೊಗ್ಗ | 30594 | 30594 | 327.34 | | |
| 11 | ಮಂಡ್ಯ | 2986 | 2986 | 18.43 | | |
| 12 | ಮೈಸೂರು | 10107 | 10107 | 144.34 | | |
| 13 | ಚಾಮರಾಜನಗರ | 3004 | 3004 | 33.59 | | |
| 14 | ಚಿಕ್ಕಮಗಳೂರು | 37757 | 36557 | 552.89 | | 1200 |
| 15 | ಚಿತ್ರದುರ್ಗ | 3962 | 3962 | 37.65 | | |
| 16 | ರಾಯಚೂರು | 22241 | 22241 | 94.55 | | |
| 17 | ಕೊಪ್ಪಳ | 6735 | 6735 | 40.95 | | |
| 18 | ಉತ್ತರ ಕನ್ನಡ | 75753 | 75753 | 880.35 | | |
| 19 | ಹಾಸನ | 8530 | 8207 | 44.64 | | 323 |
| 20 | ಯಾದಗಿರ | 2991 | 2991 | 13.06 | | |
| 21 | ಕಲಬುರಗಿ | 7522 | 7522 | 41.67 | | |
| 22 | ಕೋಲಾರ | 2527 | 2527 | 33.34 | | |
| 23 | ಚಿಕ್ಕಬಳ್ಳಾಪುರ | 3665 | 3665 | 42.31 | | |
| 24 | ಕೊಡಗು | 23487 | 23487 | 542.88 | | |
| 25 | ತುಮಕೂರು | 28401 | 28401 | 152.25 | | |
| 26 | ದಾವಣಗೆರೆ | 8530 | 8530 | 62.24 | | |
| 27 | ಉಡುಪಿ | 4074 | 4074 | 61.44 | | |
| 28 | ದಕ್ಷಿಣ ಕನ್ನಡ | 17988 | 17988 | 338.69 | | |
| 29 | ಹಾವೇರಿ | 6736 | 6724 | 49.26 | 12 | |
| 30 | ಗದಗ | 4812 | 4812 | 35.69 | | |
| 31 | ಧಾರವಾಡ | 5693 | 5685 | 47.35 | 8 | |
| | ಒಟ್ಟು | 781906 | 780363 | 6799.17 | 20 | 1523 |

L Sarala

Assistant Registrar of Cooperative Societies (Credit)

ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ಶ್ರೀ ಸಿ.ಟಿ ರವಿ (ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:751 ಗೆ ಅನುಬಂಧ-2

ದಿ.31-12-2023 ಕ್ಕೆ ಸುಸ್ತಿ ಆಗಿದ್ದ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲಗಳ ಕಂತುಗಳನ್ನು ರೈತರು ಸಹಕಾರ ಸಂಘಗಳಿಗೆ ಪಾವತಿಸಿ ಸಂಬಂಧಿಸಿದ ಬಡ್ಡಿ ಮನ್ನಾ ಕ್ಲೇಮು ವಿವರ(ರೂ.ಲಕ್ಷ)

| ಕ್ರ. ಸಂ | ಜಿಲ್ಲೆಯ ಹೆಸರು | ರೈತರ ಸಂಖ್ಯೆ | ರೈತರು ಮರುಪಾವತಿಸಿದ ಸುಸ್ತಿ ಅಸಲು | ಬಡ್ಡಿ ಮನ್ನಾ ಕ್ಲೇಮು ಮೊತ್ತ |
|---|---|---|---|---|
| 1 | Bagalkot | 261 | 573.48 | 272.08 |
| 2 | bangalore rural | 54 | 118.55 | 66.08 |
| 3 | bangalore urban | 126 | 70.74 | 31.97 |
| 4 | BELAGAVI | 49 | 27.53 | 18.90 |
| 5 | bellary | 283 | 519.83 | 323.48 |
| 6 | BIDAR | 3633 | 3383.30 | 2753.40 |
| 7 | Chamarajanagar | 138 | 102.38 | 62.34 |
| 8 | chikkamagalùru | 78 | 227.21 | 158.80 |
| 9 | CHITRADURGA | 114 | 252.86 | 98.04 |
| 10 | Davanagere | 26 | 35.48 | 12.40 |
| 11 | Dharwad | 12 | 16.96 | 14.09 |
| 12 | Gadag | 36 | 51.37 | 20.44 |
| 13 | Hassan | 63 | 65.77 | 27.99 |
| 14 | Haveri | 11 | 4.57 | 2.04 |
| 15 | Kalaburagi | 464 | 1576.07 | 1643.77 |
| 16 | Kodagu | 50 | 73.67 | 36.83 |
| 17 | Kolar | 567 | 544.81 | 167.41 |
| 18 | Chikkaballapur | 234 | 387.39 | 160.64 |
| 19 | Koppal | 11 | 22.43 | 16.21 |
| 20 | Mandya | 308 | 191.48 | 96.43 |
| 21 | Mysore | 615 | 516.23 | 264.99 |
| 22 | Raichur | 89 | 162.54 | 118.27 |
| 23 | ramanagara | 33 | 115.71 | 40.85 |
| 24 | shimoga | 144 | 560.10 | 255.27 |
| 25 | South canara | 1265 | 909.08 | 695.95 |
| 26 | TUMKUR | 122 | 641.91 | 358.50 |
| 27 | Udupi | 491 | 322.10 | 198.74 |
| 28 | Uttara Kannada | 1493 | 955.94 | 551.60 |
| 29 | Vijayapur | 401 | 714.96 | 312.38 |
| 30 | Yadgir | 64 | 236.11 | 219.13 |
| | BANGALORE(kascard bank) | 23139 | 14226.56 | 13795.81 |
| | Grand Total | 34374 | 27607.14 | 22794.82 |

L Sonalar

Assistant Registrar of Cooperative Societies
(Credit)